## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:-2020-21ನೇ ಸಾಲಿನಲ್ಲಿ ಗುತ್ತಿಗೆ/ಹೊರಗುತ್ತಿಗೆ/ನಿಯೋಜನೆ ಮತ್ತಿತರ ವೇತನ/ ಸಂಬಂಧಿತ ಅನುದಾನಗಳನ್ನು ಬಿಡುಗಡೆ ಮಾಡಲು ಆರ್ಥಿಕ ಅಧಿಕಾರ ಪ್ರತ್ಯಾಯೋಜನೆಯ ಬಗ್ಗೆ.

ಓದಲಾಗಿದೆ:-

1. ಸರ್ಕಾರದ ಆದೇಶ ಸಂಖ್ಯೆ: ಆಇ 2 ಟಿಎಫ್‌ಪಿ 2020, ದಿ:01.04.2020.
2. ಸರ್ಕಾರದ ಆದೇಶ ಸಂಖ್ಯೆ: ಆಇ 2 ಟಿಎಫ್‌ಪಿ 2020, ದಿ:28.04.2020.
3. ಸರ್ಕಾರದ ಆದೇಶ ಸಂಖ್ಯೆ: ಆಇ 2 ಟಿಎಫ್‌ಪಿ 2020, ದಿ:30.05.2020.
4. ಸರ್ಕಾರಹ ಆದೇಶ ಸಂಖ್ಯೆ: ಆಇ 4 ಟಿಎಫ್‌ಪಿ 2020, ದಿ:27.10.2020.

ಪ್ರಸ್ತಾವನೆ:-

ಮೇಲೆ (1)(2) ಮತ್ತು (3) ರಲ್ಲಿ ಓದಲಾದ ಆದೇಶಗಳಲ್ಲಿ 2020-21 ನೇ ಸಾಲಿಗೆ ಅಕ್ಟೋಬರ್ ವರೆಗಿನ ವೇತನ ಸೆಳೆಯಲು (ಮಾರ್ಚ್ 2020 ರ ವೇತನ ಸೇರಿದಂತೆ) ಸರ್ಕಾರದ ಕಾರ್ಯದರ್ಶಿ/ ಪ್ರಧಾನ ಕಾರ್ಯದರ್ಶಿಗಳಿಗೆ ಆರ್ಥಿಕ ಅಧಿಕಾರ ಪ್ರತ್ಯಾಯೋಜನೆ ಮಾಡಲಾಗಿದೆ. ಮೇಲೆ(4)ರಲ್ಲಿ ಓದಲಾದ ಆದೇಶದಲ್ಲಿ ನವೆಂಬರ್ 2020 ರಿಂದ ಫೆಬ್ರವರಿ 2021 ರವರೆಗಿನ ವೇತನದ ಬಾಬ್ತು ಅನುದಾನಗಳನ್ನು ವೇತನದ ಲೆಕ್ಕ ಶೀರ್ಷಿಕೆಗಳಡಿ ಬಿಡುಗಡೆ ಮಾಡಲು ಆಡಳಿತ ಇಲಾಖೆಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ ಕಾರ್ಯದರ್ಶಿಗಳಿಗೆ ಆರ್ಥಿಕ ಅಧಿಕಾರ ಪ್ರತ್ಯಾಯೋಜನೆ ಮಾಡಲಾಗಿದೆ.

ಆದರೆ, ಉದ್ದೇಶಿತ ಲೆಕ್ಕ ಶೀರ್ಷಿಕೆ "033, 034, 035, 101 ಮತ್ತು 115" ರಡಿಯಲ್ಲಿ ಸಹಾ ಸಂಬಂಧಿತ ಅನುದಾನವನ್ನು ವೇತನ ಸೆಳೆಯುತ್ತಿರುವುದರಿಂದ ಹಾಗೂ ಕೆಲವು ಸಂದರ್ಭಗಳಲ್ಲಿ ಈ ಶೀರ್ಷಿಕೆಗಳಲ್ಲಿ ಸಹಾ ಫೆಬ್ರವರಿ 2020 ರ ವೇತನವನ್ನು ಮಾರ್ಚ್ 2020 ರಲ್ಲಿ ಸೆಳೆದಿರುವ ಪರಿಣಾಮವಾಗಿ, ಸರ್ಕಾರದ ಆದೇಶ ಸಂ:ಎಫ್‌ಡಿ 2 ಟಿಎಫ್‌ಪಿ 2020, ದಿ:30.05.2020 ರಂತೆ ಅಕ್ಟೋಬರ್ 2020 ರವರೆಗಿನ ವೇತನ ಮಾತ್ರ ಸೆಳೆಯಲು ಅನುದಾನ ಲಭ್ಯವಿರುವುದಾಗಿ ತಿಳಿದುಬಂದಿದೆ. ಆದ್ದರಿಂದ ಈ ಕೆಳಗಿನಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂ: ಎಫ್‌ಡಿ: 4 ಟಿಎಫ್‌ಪಿ: 2020, ದಿನಾಂಕ:04-11-2020.**

ಆರ್ಥಿಕ ಇಲಾಖೆಯ ಸಹಮತಿ ಇದೆಯೆಂದು ಭಾವಿಸಿ ಉದ್ದೇಶಿತ ಲೆಕ್ಕ ಶೀರ್ಷಿಕೆ "033-ದಿನಗೂಲಿ ವೇತನ, 034-ಗುತ್ತಿಗೆ/ಹೊರಗುತ್ತಿಗೆ, 035-ನಿಗಮ/ಮಂಡಳಿಗಳಿಂದ ನಿಯೋಜನೆ ಮೇಲಿರುವ ನೌಕರರ ವೇತನ, 101-ಸಹಾಯಾನುದಾನ ಸಂಸ್ಥೆಗಳ ವೇತನ ಮತ್ತು 115-ಸಹಾಯಾನುದಾನ ಸಂಸ್ಥೆಗಳಲ್ಲಿನ ಗುತ್ತಿಗೆ/ಹೊರಗುತ್ತಿಗೆ ನೌಕರರ ವೇತನ" ಗಳಡಿ 2020-21ನೇ ಸಾಲಿಗೆ ಒದಗಿಸಿರುವ ಅನುದಾನದಲ್ಲಿ ಬಾಕಿಯಿರುವ ವೇತನ

ಅನುದಾನವನ್ನು ಬಿಡುಗಡೆ ಮಾಡಲು ಆಡಳಿತ ಇಲಾಖೆಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ ಕಾರ್ಯದರ್ಶಿಗಳಿಗೆ ಆರ್ಥಿಕ ಅಧಿಕಾರ ಪ್ರತ್ಯಾಯೋಜಿಸಿದೆ.

ಒಂದು ವೇಳೆ ದಿನಾಂಕ:30.05.2020 ರ ಆದೇಶದಂತೆ ಮೇಲ್ಕಂಡ ಯಾವುದೇ ಉದ್ದೇಶಿತ ಲೆಕ್ಕ ಶೀರ್ಷಿಕೆಗಳಲ್ಲಿ ನವೆಂಬರ್ 2020 ರ ತಿಂಗಳಿನ ವೇತನವನ್ನು ಈಗಾಗಲೇ ಬಿಡುಗಡೆ ಮಾಡಿದ ಸಂದರ್ಭದಲ್ಲಿ ಈಗ ಡಿಸೆಂಬರ್ 2020 ರಿಂದ ಮಾರ್ಚ್ 2021 ರವರೆಗೆ ನಾಲ್ಕು ತಿಂಗಳ ವೇತನ ಅನುದಾನವನ್ನು ಮಾತ್ರ ಬಿಡುಗಡೆ ಮಾಡಲು ಅವಕಾಶವಿರುತ್ತದೆ.

ಖಜಾನೆ ಇಲಾಖೆಯ ಟಿ.ಎನ್.ಎಂ.ಸಿ. ಯು ಮೇಲ್ಕಂಡ ಉದ್ದೇಶಿತ ಲೆಕ್ಕ ಶೀರ್ಷಿಕೆಗಳಡಿಯಲ್ಲಿ 2020-21 ನೇ ಸಾಲಿಗೆ ಒದಗಿಸಿರುವ ಅನುದಾನದಲ್ಲಿ ಬಿಡುಗಡೆಗೆ ಬಾಕಿ ಉಳಿದಿರುವ ಅನುದಾನಗಳನ್ನು ಆಡಳಿತ ಇಲಾಖೆಗಳಿಗೆ ಬಿಡುಗಡೆ ಮಾಡಲು ಕ್ರಮವಹಿಸುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು
ಅವರ ಹೆಸರಿನಲ್ಲಿ

Ekroop Caur 4/11

(ಡಾ॥ ಏಕ್‌ರೂಪ್ ಕೌರ್)

ಸರ್ಕಾರದ ಪ್ರಧಾನ ಕಾರ್ಯದರ್ಶಿ (ಆ ಮತ್ತು ಸಂ)
ಆರ್ಥಿಕ ಇಲಾಖೆ.

ಇವರಿಗೆ:-

1. ಪ್ರಧಾನ ಮಹಾಲೇಖಪಾಲರು, ಲೆಕ್ಕಪತ್ರಗಳು ಮತ್ತು ಹಕ್ಕುಗಳು ಕರ್ನಾಟಕ, ರೆಸಿಡೆನ್ಸಿ ರಸ್ತೆ, ಅಂಚೆ ಪೆಟ್ಟಿಗೆ 5329/5369. ಬೆಂಗಳೂರು.
2. ಪ್ರಧಾನ ಮಹಾಲೇಖಪಾಲರು (ಜಿಎಸ್‌ಎಸ್‌ಎ), ರೆಸಿಡೆನ್ಸಿ ರಸ್ತೆ, ಕರ್ನಾಟಕ, ಬೆಂಗಳೂರು.
3. ಪ್ರಧಾನ ಮಹಾಲೇಖಪಾಲರು (ಇ.ಆರ್.ಎಸ್.ಎ), ರೆಸಿಡೆನ್ಸಿ ರಸ್ತೆ, ಕರ್ನಾಟಕ, ಬೆಂಗಳೂರು.
4. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
5. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಮತ್ತು ಅಭಿವೃದ್ಧಿ ಆಯುಕ್ತರು, ವಿಧಾನಸೌಧ.
6. ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿಗಳು/ ಕಾರ್ಯದರ್ಶಿಗಳು.
7. ಎಲ್ಲಾ ಇಲಾಖಾ ಮುಖ್ಯಸ್ಥರುಗಳು.
8. ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು.
9. ಎಲ್ಲಾ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.
10. ಸರ್ಕಾರದ ಎಲ್ಲಾ ಅಪರ/ಜಂಟಿ/ಉಪ/ಅಧೀನ ಕಾರ್ಯದರ್ಶಿಗಳು, ಹಾಗೂ ಆಂತರಿಕ ಆರ್ಥಿಕ ಸಲಹೆಗಾರರು.
11. ಆರ್ಥಿಕ ಇಲಾಖೆಯ ಎಲ್ಲಾ ಶಾಖೆಗಳಿಗೆ.
12. ನಿರ್ದೇಶಕರು, ಖಜಾನೆ ಇಲಾಖೆ, ಪೋಡಿಯಂ ಬ್ಲಾಕ್, ಬೆಂಗಳೂರು.
13. ಹೆಚ್ಚುವರಿ ನಿರ್ದೇಶಕರು, ಟಿ.ಎನ್.ಎಂ.ಸಿ, ಖನಿಜ ಭವನ, ಬೆಂಗಳೂರು.
14. ಬಿಡಿ ಪ್ರತಿ / ಶಾ.ರ.ಕ.